**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**O.S.** 277/2024 **ಪಿ ಡಬ್ಲ್ಯೂ:1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕ: 15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಕೆ. ಎಚರವರಿಂದ.**

ನಾನು ರೈತನಾಗಿ ಕೆಲಸ ಮಾಡುತ್ತೇನೆ ಮತ್ತು ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತೇನೆ. 15 ವರ್ಷದಿಂದ ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತಿದ್ದೇನೆ. ನನ್ನ ಮಕ್ಕಳು ಸಹ ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತಿದ್ದಾರೆ. ನಾನು ನನ್ನ ಮಕ್ಕಳು ಸೇರಿ ಈ ದಾವೆ ಮಾಡಿದ್ದೇವೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ದಾವೆ ಮಾಡಿಲ್ಲ. ನಾನೇ ದಾವೆ ಸಲ್ಲಿಸಲು ಮಾಹಿತಿ ನೀಡಿದ್ದೇನೆ. ನಾನೇ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ನನ್ನ ಹೊರತುಪಡಿಸಿ ಬೇರೆ ಯಾರು ಮಾಹಿತಿ ನೀಡಿಲ್ಲ. ನಾನು ಮುಖ್ಯ ವಿಚಾರಣೆಯನ್ನು ನನ್ನ ಒಬ್ಬನ ಪರವಾಗಿ ಹಾಕಿದ್ದೇನೆ. ನಾನು ಮುಖ್ಯ ವಿಚಾರಣೆಯಲ್ಲಿ ವಾದಿ ನಂಬರ 2 ಮತ್ತು ವಾದಿ ನಂಬರ 3 ರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದು ಹೇಳಿದ್ದೇನೆ ಎಂದರೆ ಸರಿ. ವಾದಿ ನಂಬರ 2 ಮತ್ತು 3 ನೇದವರು ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿಲ್ಲ. ನನ್ನ ಮಗನ ಹೆಸರು ವೀರುಪಾಕ್ಷಪ್ಪ ತಂದೆ ಬಸವರಾಜ ಮಡ್ಡಿ ಅವರ ಪರವಾಗಿ ಸಾಕ್ಷಿ ನಾನೇ ನುಡಿಯುತ್ತಿದ್ದೇನೆ.

ಸರ್ವೆ ನಂಬರ 189 14 ಎಕರೆ 24 ಗುಂಟೆ ಇದೆ. ಪಶ್ಚಿಮಕ್ಕೆ: ಹನುಮಂತಪ್ಪ ಬೇವೂರ ಹೊಲ ಇದೆ. ಪೂರ್ವಕ್ಕೆ: ರಂಗಪ್ಪ ಐಹೋಳೆ ರವರ ಹೊಲ, ಉತ್ತರ-ದಕ್ಷಿಣಕ್ಕೆ: ರಸ್ತೆ ಇದೆ. ನಾನು ಯಾವತ್ತು ಮೇಲೆ ಹೇಳಿದ ಜಮೀನಿನಲ್ಲಿ ಕಬ್ಜಾ ಸಾಗುವಳಿಯಲ್ಲಿ ಇಲ್ಲವೆಂದರೆ ಸರಿಯಲ್ಲ. ನಾನು ಕಬ್ಜೆ ಇಲ್ಲ, ಸಾಗುವಳಿ ಮಾಡುತ್ತಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಶಾನೆ ಪಿ1 ರಲ್ಲಿರುವ ವೀರುಪಾಕ್ಷಪ್ಪ ತಂದೆ ವೀರಪ್ಪ ಮಡ್ಡಿ ನನ್ನ ತಂದೆಯಾಗಬೇಕು. ನನ್ನ ಹೆಸರು ಬಸವರಾಜ ಫಕ್ಕೀರಪ್ಪ ಮಡ್ಡಿ. ನಮ್ಮ ತಂದೆಯ ಹೆಸರು ಫಕ್ಕೀರಪ್ಪ. ನನ್ನ ಜನಕ ತಂದೆಯ ಹೆಸರು ವೀರಪ್ಪ ವೀರುಪಾಕ್ಷಪ್ಪ ಮಡ್ಡಿ. ಸಾಕು ತಂದೆಯ ಹೆಸರು ಪಕ್ಕೀರಪ್ಪ ವೀರುಪಾಕ್ಷಪ್ಪ ಮಡ್ಡಿ. ದಾವಾ ಆಸ್ತಿ ಜನಕ ತಂದೆಯದು. ಜನಕ ತಂದೆ ಬೇರೆ, ಸಾಕು ತಂದೆ ಬೇರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.